# MYSORE LEGISLATIVE ASSEMBLY.

## FIFTH-DAY.

*Friday, 14th October 1955.*

The House met in the Crawford Hall, Mysore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

## QUESTIONS AND ANSWERS

### Sri Ramadevara Channel (inadequate supply of water to certain lands.)

*Q.*—364. Sri S. M. LINGAPPA (Krishnarajapet).—

Will the Government be pleased to state :—

(*a*) whether it has come to their notice that the raiyats of Madapura, Kotahal, Dawarahalli and other villages in Krishnarajapet Taluk are not getting adequate supply of weter to their lands under Sri Ramadevara Channel;

(*b*) if so, the steps taken by them for supplying water adequately to the above villages?

*A.*—Sri Kadidal MANJAPPA (Minister for Revenue and Public Works).—

(*a*) Inadequacy of water supply was felt for a very brief period during August 1955 when rainfall was scanty.

(*b*) Water was led into Madapur pick-up channel by means of temporary arrangements and by proper distribution with the help of additional staff.

ಶ್ರೀ ಎಸ್. ಎಂ. ಲಿಂಗಪ್ಪ.—ಶ್ರೀರಾಮದೇವರ ನಾಲೆಯಿಂದ ನೀರು ಸಾಗಾಗತಕ್ಕಂಥ ಅಚ್ಚುಕಟ್ಟಿನ ರೈತರಿಗೆ ಸರಿಯಾಗಿ ನೀರು ಒದಗಿಸುತ್ತಿಲ್ಲ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ. ಕಳೆದ ಆಗಸ್ಟ್ ತಿಂಗಳಿನಲ್ಲಿ ಮಾತ್ರ ನೀರು ಸರಿಯಾಗಿ ಒದಗಲಿಲ್ಲವೆಂಬ ವಿಚಾರ ನನ್ನ ಗಮನಕ್ಕೆ ಬಂದಿದೆ.

ಶ್ರೀ ಎಸ್. ಎಂ. ಲಿಂಗಪ್ಪ.—ಸೆಪ್ಟಂಬರ್ ತಿಂಗಳಿನಲ್ಲೂ ಕೂಡ ನೀರು ಸರಬರಾಯಿ ಸರಿಯಾಗಿ ಒದಗುತ್ತಿಲ್ಲವೆಂದು ಆ ರೈತರು ಸರ್ಕಾರಕ್ಕೆ ದೂರುಗಳನ್ನು ಕೊಟ್ಟಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಸಾಕಷ್ಟು ಮಳೆ ಬಾರದೆ ತೊಂದರೆ ಆದರೆ ಸರ್ಕಾರದವರೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಲಿಂಗಪ್ಪ.—ಇದೇ ರೀತಿ ಪ್ರತಿ ವರ್ಷವೂ ಸಾಕಷ್ಟು ಮಳೆಯಾಗದೆ ಅಲ್ಲಿ ನೀರಿಗೆ ತೊಂದರೆ ಇದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾನಾಗಲೇ ತಿಳಿಸಿದಂತೆ ಮಳೆ ಬಾರದೆ ಆಗತಕ್ಕ ತೊಂದರೆಗೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಬಾಕಿ ವಿಚಾರದಲ್ಲಿ ರೈತರಿಗೆ ತೊಂದರೆಯಾಗದಿರುವಂತೆ ನೋಡಿಕೊಳ್ಳಲು ಎಲ್ಲಾ ಏರ್ಪಾಡುಗಳನ್ನೂ ಮಾಡಿದ್ದೇವೆ.

ಶ್ರೀ ಎಸ್. ಎಂ. ಲಿಂಗಪ್ಪ.—ಈ ನಾಲೆಯಲ್ಲಿ ಹೂಳು ತುಂಬಿಕೊಂಡು ಬಹಳ ದಿವಸಗಳಿಂದಲೂ ದುರಸ್ತಾಗದೆ ಸ್ವಲ್ಪ ತೊಂದರೆ ಆಗುತ್ತಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೂಳು ತೆಗೆಸಿದ್ದೇವೆ.

ಶ್ರೀ ಎಸ್. ಎಂ. ಲಿಂಗಪ್ಪ.—ಆದಾಗ್ಯೂ ನೀರು ಸರಬರಾಜು ಸರಿಯಾಗಿ ಆಗುತ್ತಿಲ್ಲ. ಆದುದರಿಂದ ಈ ನಾಲೆಯನ್ನೇ ಪೂರ್ತಿಯಾಗಿ ದುರಸ್ತು ಮಾಡಲು ತಾವೇನಾದರೂ ಒಂದು ಅಂದಾಜನ್ನು ತಯಾರಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ತಮ್ಮ ಪಾಲಿನ ಕೆಲಸವನ್ನು ಎಂದರೆ ಈ ಆನ್ಯುಯಲ್ ರಿಪೇರ್ಸ್ ಎಂದು ಏನು ಹೇಳುತ್ತೇವೋ ಅದನ್ನು ಮಾಡಿದರೆ ಪರವಾಯಿಲ್ಲ. ಇಲ್ಲದಪಕ್ಷಕ್ಕೆ ಅವರು ಏಕರೇಜ್ ಸೆಸ್‌ನ್ನು ಕೊಟ್ಟ ಪಕ್ಷದಲ್ಲಿ ಈ ಕೆಲಸವನ್ನು ಸರ್ಕಾರದವರೇ ಕೈಗೊಳ್ಳಲು ಸಿದ್ಧವಾಗಿದ್ದಾರೆ.

ಶ್ರೀ ಎಸ್. ಎಂ. ಲಿಂಗಪ್ಪ.—ಆ ಸಂಬಂಧಪಟ್ಟ ರೈತರೆಲ್ಲಾ ಈ ಏಕರೇಜ್ ಸೆಸ್ಸನ್ನು ಕೊಡಲು ಒಪ್ಪಿರುತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

---

### Gayathri Reservoir Channels.

*Q.*—550. Sri B. N. RAME GOWDA (Sira).—

Will the Government be pleased to state :—

(*a*) whether it is a fact that the original estimate of Gayathri Reservoir is changed in respect of the right and left channels of the Reservoir;